


## ಅನುಷ್ಕಾ - ಕೊಹ್ಲಿ ಕುಚುಕುಚು!

ಮೈದಾನದಲ್ಲಿ ಶತಕಗಳ ಹಿಂದೆ ಶತಕ ಬಾರಿಸುತ್ತಿರುವ ಕ್ರಿಕೆಟಿಗ ವಿರಾಟ್ ಕೊಹ್ಲಿ ಮೈದಾನದಾಚೆಗಿನ 'ಆಟ'ಕ್ಕೂ ಹೆಸರುವಾಸಿ. ಅದರಲ್ಲೂ ನಟೀಮಣಿಯರ 'ಚೇಸಿಂಗ್'ನಲ್ಲಿ ಕೊಹ್ಲಿ ಅವರದು ಎತ್ತಿದ ಕೈ. ಆದರೆ ಆ ಆಟವೆಲ್ಲಾ ಚುಟುಕು ಕ್ರಿಕೆಟ್‌ನ ಫಲಿತಾಂಶದಂತೆ. ಒಬ್ಬ ನಟಿಯೊಂದಿಗೆ ಕೊಹ್ಲಿ ಹೆಸರು ಕೇಳಿಬರುತ್ತಿರುವಾಗಲೇ ಬೇರೆ ನಟಿಯೊಂದಿಗೋ ರೂಪದರ್ಶಿಯೊಂದಿಗೋ ಕೊಹ್ಲಿ ದರ್ಶನ ನೀಡುತ್ತಾರೆ. ಹೀಗೆ ಕೊಹ್ಲಿ ಕ್ರಿಕೆಟ್ಟಿನಂತೆಯೇ ನಟಿಯರ ಸಂಖ್ಯೆಯಲ್ಲೂ ಸೆಂಚುರಿ ಬಾರಿಸುತ್ತಿದ್ದಾರೆ.

ಈಗ ಕೊಹ್ಲಿ ಹೊಸ ಇನ್ನಿಂಗ್ಸ್ ಶುರು ಮಾಡಿರುವುದು ಬೆಂಗಳೂರು ಹುಡುಗಿ ಅನುಷ್ಕಾ ಶರ್ಮಾ ಜೊತೆಗೆ. ಇತ್ತೀಚೆಗಷ್ಟೇ ಶಾಂಪೂ ಜಾಹೀರಾತೊಂದರಲ್ಲಿ ಒಟ್ಟಿಗೆ ಕ್ಯಾಮೆರಾ ಎದುರಿಸಿದ್ದ ಅನುಷ್ಕಾ ಮತ್ತು ಕೊಹ್ಲಿ ನಡುವೆ ಕುಚುಕು ಕುಚುಕು ಶುರುವಾಗಿದೆಯಂತೆ ಎಂಬ ಗಾಳಿ ಸುದ್ದಿ ಬಿ–ಟೌನಿನ ಗಲ್ಲಿಗಳಲ್ಲಿ ಹರಿದಾಡುತ್ತಿದೆ. ಮುಂಬೈನ ಹಾದಿಗಳಲ್ಲಿ ಅನುಷ್ಕಾ ಮತ್ತು ಕೊಹ್ಲಿ ಇಬ್ಬರೇ ಕುಳಿತಿದ್ದ ಕಪ್ಪು ಬಣ್ಣದ ರೇಂಜ್ ರೋವರ್ ಕಾರು ಸುತ್ತಾಡುತ್ತಿದ್ದುದನ್ನು ಕಂಡವರಿದ್ದಾರೆ. ಸಂಜೆಗತ್ತಲಲ್ಲಿ ಅನುಷ್ಕಾ ಬಣ್ಣಬಣ್ಣದ ಉಡುಗೆ ತೊಟ್ಟು ವಿರಾಟ್ ಜೊತೆ ಅಲೆಯುತ್ತಿರುವ ಸುದ್ದಿ ಬಾಲಿವುಡ್ಡಿನಲ್ಲಿ ಕುತೂಹಲ ಮೂಡಿಸಿದ್ದರೂ ಯಾರೂ ಅದರ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಂಡಿಲ್ಲ.

## 'ಮಿ. ಜೋ...'ನಲ್ಲಿ ಸೋಹಾ ಬಿಕಿನಿ

ಅಧರಕ್ಕೆ ಅಧರ ತಗುಲಿಸಿ ಪಡ್ಡೆ ಹೈಕಳನ್ನು ರೋಮಾಂಚನಗೊಳಿಸಿದ್ದ ನವಾಬ ಮನೆಯ ಹುಡುಗಿ ಸೋಹಾ ಅಲಿಖಾನ್, ಆಗಾಗ ಬೀಡು ಬಿರುಸಾಗಿ ತೆರೆ ಮೇಲೆ ಕಾಣಿಸಿಕೊಂಡರೂ ಅಂಕೆ ಮೀರಿ ಹೋದವರಲ್ಲ. ಆದರೆ ಸೋಹಾ ತಮ್ಮ ಮೈಸಿರಿಯನ್ನು ಪರದೆ ಮೇಲೆ ತೆರೆದಿಡುವ ಸಿದ್ಧತೆ ನಡೆಸಿದ್ದಾರೆ. 'ಮಿ. ಜೋ ಬಿ ಕರ್ವಾರ್ಲ್ಹೊ' ಚಿತ್ರದಲ್ಲಿ ಸೋಹಾ ಬಿಕಿನಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿ ಸೋಹಾ ಹಲವು ಅವತಾರಗಳಲ್ಲಿ ಪ್ರೇಕ್ಷಕನ ಮುಂದೆ ಬರುತ್ತಿದ್ದಾರೆ. ಅದರಲ್ಲಿ ಮುಖ್ಯವಾದದ್ದು ಪೊಲೀಸ್ ಆಫೀಸರ್ ಪಾತ್ರ. ಜೊತೆಯಲ್ಲಿ ಕ್ಯಾಬರೆ ನೃತ್ಯಗಾತಿಯಾಗಿಯೂ ಸೋಹಾ 'ಪ್ರತಿಭೆ' ಪ್ರದರ್ಶಿಸಲಿದ್ದಾರೆ. ಬಿಕಿನಿಯಲ್ಲಿ ಕಾಣಿಸಿಕೊಳ್ಳುತ್ತಿದ್ದರೂ ಅದು ಸಭ್ಯತೆಯ ಗಡಿ ದಾಟುವುದಿಲ್ಲ ಎಂದು ಸೋಹಾ ಹೇಳುತ್ತಿದ್ದಾರೆ. ಅರ್ಷದ್ ವಾರ್ಸಿ ಮತ್ತು ಜಾವೇದ್ ಜಾಫ್ರಿ ಚಿತ್ರದ ತಾರಾಗಣದಲ್ಲಿರುವ ಪ್ರಮುಖ ತಾರೆಯರು.





## ಕಲ್ಕಿ-ಅನುರಾಗ್ ದೂರ?

ನಾಲ್ಕು ವರ್ಷಗಳ ಹಿಂದೆ 'ದೇವ್ ಡಿ' ಚಿತ್ರದ ಚಿತ್ರೀಕರಣದ ಸೆಟ್‌ನಲ್ಲಿ ಈ ಹೃದಯಗಳು ಬೆಸೆದದ್ದು. ಆತ ಆ್ಯಕ್ಷನ್ ಕಟ್ ಹೇಳುತ್ತಿದ್ದರೆ, ಆಕೆ ಆತ ಹೇಳಿದಂತೆ ಕ್ಯಾಮೆರಾ ಮುಂದೆ ಅಭಿನಯಿಸುತ್ತಿದ್ದಳು. ಹೀಗೆ ಸೆಟ್‌ನಲ್ಲಿ ಮೂಡಿದ ಗೆಳೆತನ ಪ್ರೀತಿಯ ಸ್ವರೂಪ ಪಡೆಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಒಂದಷ್ಟು ಕಾಲ ಒಟ್ಟಿಗೆ ಸುತ್ತಾಡಿ ಎರಡು ವರ್ಷ ಮದುವೆಯಾಗದೆಯೇ ಸಂಸಾರ ನಡೆಸಿದರು. ಎರಡು ವರ್ಷದ ಬಳಿಕ ಗಣ್ಯರ ಸಮ್ಮುಖದಲ್ಲಿ ಹಸೆಮಣೆ ಏರಿತು ಈ ಜೋಡಿ. ಒಮ್ಮೆ ಸಂದರ್ಶನದಲ್ಲಿ ಕಲ್ಕಿ ಇಷ್ಟು ಸಮಯವಾದರೂ ವಿರಸವಿಲ್ಲದೆ ಸಂಸಾರ ನಡೆಸುತ್ತಿರುವುದರ ಗುಟ್ಟೇನು? ಎಂಬ ಪ್ರಶ್ನೆಗೆ 'ಇಬ್ಬರ ನಡುವಿನ ಪ್ರೀತಿ ನಂಬಿಕೆ' ಎಂದು ಉತ್ತರಿಸಿದ್ದರು.

ಆದರೆ ಈಗ ಅನುರಾಗ್ ಕಶ್ಯಪ್ ನಟಿ ಹುಮಾ ಖುರೇಷಿ ಜೊತೆ ಸುತ್ತಾಟ ಶುರು ಮಾಡಿದ್ದರೆ, ಕಲ್ಕಿ ಗೋವಾದಲ್ಲಿ ಗೆಳೆಯನೊಬ್ಬರ ಜೊತೆ ತಿರುಗಾಟ ನಡೆಸಿದ್ದರು. ಇಬ್ಬರ ದಾಂಪತ್ಯ ಜೀವನಕ್ಕೆ ಅಂತ್ಯಹಾಡುವ ದಿನಗಳು ಸಮೀಪಿಸುತ್ತಿವೆ ಎಂಬ ಗುಲ್ಲೆದ್ದಿದೆ. ತಮ್ಮ ವಿರಸ ಹೊರಗೆ ಸುದ್ದಿಯಾಗುತ್ತಿರುವುದನ್ನು ಕಂಡು ಬೆಚ್ಚಿರುವ ಕಲ್ಕಿ ಮತ್ತು ಅನುರಾಗ್ 'ನಾವು ಡೈವೋರ್ಸ್ ಪಡೆಯಲು ಮುಂದಾಗುತ್ತಿಲ್ಲ. ನಮ್ಮ ನಡುವೆ ಕೆಲವು ಅಭಿಪ್ರಾಯಭೇದಗಳಿವೆ. ನಿಧಾನವಾಗಿ ಅವುಗಳನ್ನು ಬಗೆಹರಿಸಿಕೊಳ್ಳುತ್ತೇವೆ. ಅದಕ್ಕೆ ಸ್ವಲ್ಪ ಸಮಯ ತಗುಲಬಹುದಷ್ಟೇ. ಇದರ ಹೊರತು ಬೇರೆಯಾಗುವಂಥದ್ದು ಏನೂ ಆಗಿಲ್ಲ' ಎಂಬ ಜಂಟಿ ಹೇಳಿಕೆ ನೀಡಿದ್ದಾರೆ.

■ ಅಮಿ